ಎನ್ನುವುದನ್ನು ವಿವರಿಸಿದ್ದೇನೆ. ಇಸ್ತಾಂಬುಲ್ ನಗರವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯೆ ಪಶ್ಚಿಮದೊಂದಿಗೆ ಗುರುತಿಸಿಕೊಳ್ಳುವುದು. ಈ ದ್ವಂದ್ವ ಇದ್ದೇ ಇರುತ್ತದೆ. ಪೂರ್ವದವರ ಸಿಟ್ಟಿನೊಂದಿಗೂ ಸುಲಭವಾಗಿ ನಿಮ್ಮನ್ನು ಗುರುತಿಸಿಕೊಳ್ಳಬಲ್ಲಿರಿ. ಎಲ್ಲರೂ ಕೆಲವೊಮ್ಮೆ ಪೌರಾತ್ಯರಾದರೆ ಮತ್ತೆ ಕೆಲವೊಮ್ಮೆ ಪಾಶ್ಚಿಮಾತ್ಯರು. ಒಂದು ರೀತಿಯಲ್ಲಿ ಎರಡರ ಸಮ್ಮಿಶ್ರಣ. ನನಗೆ ಎಡ್ವರ್ಡ್ ಸೈದ್‌ನ ಓರಿಯಂಟಲಿಸಂ ಐಡಿಯಾ ಇಷ್ಟ. ಟರ್ಕಿ ವಸಾಹತುಶಾಹಿಗೆ ಒಳಪಡಲಿಲ್ಲ. ಹಾಗಾಗಿ ಅವರಿಗೆ ತಮ್ಮ ದೇಶದ ಕುರಿತು ರೊಮ್ಯಾಂಟಿಕ್ ಆಗಿರಲು ಯಾವುದೇ ಸಮಸ್ಯೆಯಿರಲಿಲ್ಲ. ಪಾಶ್ಚಾತ್ಯರು ಅರಬ್ಬರನ್ನೋ ಭಾರತೀಯರನ್ನೋ ಅವಮಾನಿಸಿದಷ್ಟು ಸುಲಭವಾಗಿ ಟರ್ಕಿಯವರನ್ನು ಅವಮಾನಿಸುವುದಿಲ್ಲ. ಇಸ್ತಾಂಬುಲ್ ನಗರ ಎರಡು ವರ್ಷಗಳ ಮಟ್ಟಿಗೆ ಶತ್ರುಗಳ ವಶದಲ್ಲಿತ್ತು. ಆಮೇಲೆ ಅವರು ಇಲ್ಲಿಂದ ಹೊರಟುಹೋದರು. ಹಾಗಾಗಿ ಅವರ ದೇಶದ ಮೇಲೆ ಆಳವಾದ ಗಾಯದ ಗುರುತುಗಳಿಲ್ಲ. ಅವರಿಗಾದ ಆಳವಾದ ಗಾಯವೆಂದರೆ ಒಟ್ಟೊಮನ್ ಆಳ್ವಿಕೆ ಕಳೆದುಹೋದದ್ದು. ಹಾಗಾಗಿ ಪಶ್ಚಿಮದವರು ನನ್ನನ್ನು ಕಡೆಗಣಿಸಿದರೂ ಆತಂಕವಾಗುವುದಿಲ್ಲ. ಟರ್ಕಿಯವರು ಪಾಶ್ಚಾತ್ತೀಕರಣಗೊಳ್ಳಬೇಕೆಂದು ಕೊಂಡರೂ ಪೂರ್ಣಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ. ಹಾಗಾಗಿ ಸಾಂಸ್ಕೃತಿಕ ಕೀಳರಿಮೆ ಕಾಡುತ್ತದೆ. ಆಗಾಗ ನನ್ನನ್ನೂ ಇದು ಕಾಡುತ್ತದೆ.

◆ **'ಸ್ನೋ' ರಾಜಕೀಯ ಪುಸ್ತಕವಾಗಿದ್ದೂ ಅದನ್ನು ಹೇಗೆ ಪ್ರಕಟಿಸಿದಿರಿ? ಅದನ್ನು ಹೇಗೆ ಹುಟ್ಟಿತು?**

1990ರ ಮಧ್ಯಭಾಗದಲ್ಲಿ ಟರ್ಕಿಯಲ್ಲಿ ಪ್ರಸಿದ್ಧನಾಗಿದ್ದೆ. ಆಗಲೇ ಕುರ್ದಿಶ್ ಗೊರಿಲ್ಲಾಗಳ ವಿರುದ್ಧ ಯುದ್ಧವೂ ಹೆಚ್ಚಾಗಿತ್ತು. ಹಳೆಯ

> ಕವಿಯ ಮೂಲಕ ದೇವರು ಮಾತಾಡುತ್ತಾನೆ ಅಂತ ನನಗನ್ನಿಸುತ್ತೆ. ಕವಿತೆ ನಿಮ್ಮನ್ನಿಡಿಯಾಗಿ ಆವರಿಸಿಕೊಂಡಿರಬೇಕು. ಕವಿತೆ ಬರೆಯಲು ಪ್ರಯತ್ನಿಸಿದೆ. ಸ್ವಲ್ಪ ಸಮಯದ ಅನಂತರ ದೇವರು ನನ್ನೊಂದಿಗೆ ಮಾತಾಡುತ್ತಿಲ್ಲ ಎಂದು ನನಗರ್ಥವಾಯಿತು.

